# ಹಾವೇರಿ ಜಿಲ್ಲೆಯ ಪ್ರವಾಸಿ ತಾಣಗಳು

## ಮುನ್ನುಡಿ

ಗುಣಮಟ್ಟದ ಶಿಕ್ಷಣವು ನಮ್ಮ ಶಾಲಾ ಶಿಕ್ಷಣದ ಗುರಿಯಾಗಿದೆ. ಕೇವಲ ತರಗತಿಯ ನಾಲ್ಕು ಗೋಡೆಗಳ ಮಧ್ಯೆ ನೀಡಲಾಗುವ ಶಿಕ್ಷಣವು ವಿದ್ಯಾರ್ಥಿಗಳ ವ್ಯಕ್ತಿತ್ವದಲ್ಲಿ ಅಪೇಕ್ಷಿತ ಬದಲಾವಣೆ ತರಲು ಸಾಧ್ಯವಿಲ್ಲವೆಂಬುದನ್ನು ನಮ್ಮ ಇಲಾಖೆಯು ಮನಗಂಡಿದೆ.

ಈ ಹಿನ್ನೆಲೆಯಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಕಳೆದ ವರ್ಷಗಳವರೆಗೆ ಕೆ.ಜಿ.ಬಿ.ವಿ. ಶಾಲೆಗಳನ್ನು ಒಳಗೊಂಡಂತೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಪರಿಶಿಷ್ಟ• ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರೆ ಪ್ರತಿಭಾನ್ವಿತ ಮಕ್ಕಳಿಗಾಗಿ ವಿಭಾಗವಾಗಿ ರಾಜ್ಯಮಟ್ಟದಲ್ಲಿ ಪ್ರವಾಸವನ್ನು ಆಯೋಜಿಸಲಾಗುತ್ತಿತ್ತು. ಆದರೆ ಈ ಶೈಕ್ಷಣಿಕ ವಿಷಯ ಮಕ್ಕಳಿಗಾಗಿ ಜಿಲ್ಲಾ ಮಟ್ಟದಲ್ಲಿ ಪ್ರವಾಸ ಕೈಗೊಳ್ಳಲಾಗುತ್ತಿದೆ.

ತಾವು ವ್ಯಾಸಂಗ ಮಾಡುತ್ತಿರುವ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸುವುದರ ಮೂಲಕ ಸ್ಥಳೀಯ ಐತಿಹಾಸಿಕ, ಸಾಂಸ್ಕೃತಿಕ, ಭೌಗೋಳಿಕ, ವೈಜ್ಞಾನಿಕ ವಿಚಾರಗಳನ್ನು ತಿಳಿಯುವುದರೊಂದಿಗೆ ಜಿಲ್ಲೆಯಲ್ಲಿ ಲಭ್ಯವಿರುವ ಉದ್ಯಾನವನ, ಮ್ಯೂಸಿಯಂ ಮುಂತಾದ ಸ್ಥಳಗಳ ಬಗ್ಗೆ ಮಾಹಿತಿ ಪಡೆದು ತಮ್ಮ ಜ್ಞಾನಾರ್ಜನೆಯನ್ನು ಮಾಡಿಕೊಳ್ಳುವುದರ ಜೊತೆಗೆ ತಮ್ಮ ಭವಿಷ್ಯದ ಬಗ್ಗೆ ಕನಸುಗಳನ್ನು ಮತ್ತು ಧನಾತ್ಮಕ ಮನೋಭಾವನೆಯನ್ನು ಕಟ್ಟಿಕೊಳ್ಳಲು ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಆಸಕ್ತಿ, ಸಂತಸ ಹಾಗೂ ಉತ್ಸಾಹದಿಂದ ಪಾಲ್ಗೊಂಡು ಈ ಪ್ರವಾಸದಿಂದ ಲಾಭವನ್ನು ಹೊಂದಿ ಕಾರ್ಯಕ್ರಮವನ್ನು ಸಂಪೂರ್ಣ ಯಶಸ್ವಿಗೊಳಿಸಲೆಂದು ಹಾರೈಸುತ್ತೇವೆ.

**ಉಪನಿರ್ದೇಶಕರು (ಅಭಿವೃದ್ಧಿ)**

ಜಿಲ್ಲಾ ಶಿಕ್ಷಣ ಮತ್ತು  ತರಬೇತಿ ಸಂಸ್ಥೆ, ಹಾವೇರಿ

**ಉಪನಿರ್ದೇಶಕರು**

ಸಾರ್ವಜನಿಕ ಶಿಕ್ಷಣ ಮತ್ತು  ಇಲಾಖೆ, ಹಾವೇರಿ

**ಮುಖ್ಯ  ಕಾರ್ಯನಿರ್ವಹಣಾಧಿಕಾರಿಗಳು**

ಜಿಲ್ಲಾ ಪಂಚಾಯತ್,  ಹಾವೇರಿ

# ಹಾವೇರಿ ತಾಲೂಕು

ಜಿಲ್ಲಾ ಕೇಂದ್ರದಿಂದ ದೂರ : ೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ

**ಪುರಸಿದ್ಧೇಶ್ವರ ದೇವಸ್ಥಾನ, ಹಾವೇರಿ**



ಹಾವೇರಿಯ ಸ್ಟೇಷನ್ ರೋಡನಲ್ಲಿರುವ ಪುರಸಿದ್ಧೇಶ್ವರ ದೇವಸ್ಥಾನ ಹುಕ್ಕೇರಿಮಠದ ಎದುರಿಗೆ ಇದೆ. ಬಸ್‌ಸ್ಟ್ಯಾಂಡನಿಂದ ಒಂದು ಕಿ.ಮೀ. ದೂರದಲ್ಲಿದ್ದು ಇದೊಂದು ಪ್ರವಾಸಿ ತಾಣಗಿದೆ.
ಈ ದೇವಸ್ಥಾನವನ್ನು ಶಿಲ್ಪಿ ಜಕ್ಕಣಾಚಾರ್ಯ ನಿರ್ಮಿಸಿದನೆಂದು ಶಾಸನಗಳಲ್ಲಿ ಮಾಹಿತಿ ಇದೆ. ಅತಿ ಸುಂದರವಾದ ಸೂಕ್ಷ್ಮ ಕಲಾಕೃತಿ ಇರುವ ಈ ಗುಡಿಯನ್ನು ಕಲ್ಯಾಣದ ಚಾಳುಕ್ಯರ ಕಾಲದಲ್ಲಿ ಕಟ್ಟಿಸಲಾಗಿದೆ. ಈ ಗುಡಿಯ ಆವರಣದಲ್ಲಿರುವ ಶಾಸನಗಳು ಹಾವೇರಿಯ ಪ್ರಾಚೀನತೆಯ ಬಗ್ಗೆ ಬೆಳಕು ಚೆಲ್ಲುತ್ತವೆ. ಶ್ರೀ ನರಸಿಂಹದೇವರು, ವಿಷ್ಣು, ಮಹಾಲಕ್ಷ್ಮಿ ಮತ್ತು ಸೂರ್ಯದೇವರ ಸುಂದರ ವಿಗ್ರಹಗಳಿವೆ.

ಇದೀಗ ಸರಕಾರ ಇದನ್ನು ರಕ್ಷಣೆ ಮಾಡುತ್ತಿದ್ದು, ಸುಂದರವಾದ ಬೃಂದಾವನ ನಿರ್ಮಿಸಿದೆ. ಪ್ರತಿದಿನ ಅಸಂಖ್ಯಾತ ಜನರು ಬೃಂದಾವನಕ್ಕೆ ವಿಶ್ರಾಂತಿಗೆಂದು ಬರುತ್ತಾರೆ.

**ಬ್ರಹ್ಮಕುಮಾರಿ ವಿಶ್ವವಿದ್ಯಾಲಯ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ:೦ ಕಿ.ಮೀ

**ಬ್ರಹ್ಮಕುಮಾರಿ ತಪೋವನ**



ಸನ್ ೨೦೦೫-೦೬ ರಲ್ಲಿ ಸಂಪೂರ್ಣಗೊಂಡ ಬ್ರಹ್ಮಕುಮಾರಿ ವಿಶ್ವವಿದ್ಯಾಲಯ ಶಿವಲಿಂಗರೂಪದ ಕಟ್ಟಡ ಹೊಂದಿದೆ. ಜನಸಾಮಾನ್ಯರಿಗೆ ನೈತಿಕ ಶಿಕ್ಷಣ, ಮೌಲ್ಯ ಶಿಕ್ಷಣ, ಧ್ಯಾನ, ಯೋಗ ಧಾರ್ಮಿಕ ಶಿಕ್ಷಣ ಹೀಗೆ ಹಲವಾರು ವಿಷಯಗಳ ಪರಿಚಯ ಮಾಡುವುದಾಗಿದೆ.
ಜನರಿಗೆ ದುಶ್ಚಟಗಳಿಂದ ದೂರವಿರಲು ಹಾಗೂ ಆತ್ಮಬಲ ಹೆಚ್ಚಿಸಿಕೊಳ್ಳಲು ಬೇಕಾದ ಜ್ಞಾನವನ್ನು ನೀಡುತ್ತಿದೆ. ಇದರ ಕೇಂದ್ರ ಕಛೇರಿಯು ರಾಜಸ್ಥಾನದ ಮೌಂಟ್‌ಅಬುವಿನಲ್ಲಿದೆ.

ಹಾವೇರಿಯ ಈಶ್ವರೀ ವಿಶ್ವವಿದ್ಯಾಲಯವು ೭, ೮, ೯ನೇ ವರ್ಗದ ಮಕ್ಕಳಿಗಾಗಿ 'ಟಚ್ ದಿ ಲೈಟ್' ಎಂಬ ಕಾರ್ಯಕ್ರಮವನ್ನು ಶಾಲೆಗಳಿಗೆ ನೀಡುತ್ತಿದೆ. ತಪೋವನ 'ಯಲ್ಲಾಪುರ' ದಲ್ಲಿ ೩೦ ಎಕರೆ ಭೂಮಿಯ ವಿಸ್ತೀರ್ಣದಲ್ಲೊಂದು ಕೇಂದ್ರವಿದ್ದು, ಅನೇಕ ದುರ್ವ್ಯಸನಿಗಳಿಗೆ ಮಾರ್ಗದರ್ಶನ ಮತ್ತು ತರಬೇತಿ ನೀಡಿ ಬದುಕು ಸಾಕಾರಗೊಳ್ಳುವಂತೆ ಮಾಡಲಾಗುತ್ತಿದೆ.

ಹಾವೇರಿಯ ಈಶ್ವರೀಯ ವಿಶ್ವವಿದ್ಯಾಲಯವು ಜಯದೇವ ನಗರದಲ್ಲಿದ್ದು ಜೆ.ಎಚ್. ಪಟೇಲ ವೃತ್ತದಿಂದ ಕಾಲ್ನಡಿಗೆ ಅಂತರದಲ್ಲಿದೆ. ಸುಂದರವಾಗಿ ನಿರ್ಮಿತವಾದ ಈ ಶಿವಾಲಯ ನೋಡುಗರನ್ನು ತನ್ನತ್ತ ಸೆಳೆಯುತ್ತದೆ.

**ಹೊಸಮಠ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ :೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ.

**ಹೊಸಮಠ**



ಹಾವೇರಿಯ ಮಾಗಾವಿ ಚಿತ್ರಮಂದಿರದ ಹತ್ತಿರವಿರುವ ಈ ಮಠವು ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿದೆ. ಮೂಲ ಮುರುಘಾಮಠವು ಹಾವೇರಿಯ ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕಾಗಿನೆಲೆ ರಸ್ತೆಯಲ್ಲಿದೆ. ಇದರ ಸ್ಥಾಪನೆಯು ಕಿ.ಶ. ೧೮೦೦ ರಲ್ಲಿ ಆಗಿದ್ದು ಪೂಜ್ಯರಾದ ಸಂಘಂಟಿತ ಸಿದ್ಧಬಸವ ಮಹಾಸ್ವಾಮಿಗಳಿಂದ ಸ್ಥಾಪನೆಯಾಯಿತು. ಮುಂದೆ ಪೂಜ್ಯ ಮಲ್ಲಿಕಾರ್ಜುನ ಜಗದ್ಗುರಗಳು ಇದನ್ನು ವಿಸ್ತರಿಸಿದರು. ಪೂಜ್ಯ ಮುರುಘರಾಜೇಂದ್ರ ಶಿವಮೂರ್ತಿ ಶರಣರು ಇದಕ್ಕೆ ಕಾಯಕಲ್ಪ ಕಲ್ಪಿಸಿದರು. ಸಮಾಜಕ್ಕೆ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಕೊಡುಗೆಯನ್ನು ಈ ಮಠವು ನೀಡಿದೆ. ಇಂದು ಅಂದಾಜು ೨೫೦೦ ಮಕ್ಕಳು ಪೂರ್ವ ಪ್ರಾಥಮಿಕ, ಡಿ.ಇಡಿ., ಬಿ.ಇಡಿ. ವ್ಯಾಸಂಗವನ್ನು ಇಲ್ಲಿ ಪಡೆಯುತ್ತಿದ್ದಾರೆ. ವಿಶೇಷ ಅಗತ್ಯತೆಯುಳ್ಳ ೧೦೦ ಮಕ್ಕಳು ವಸತಿ, ಊಟದ ಸೌಲಭ್ಯ ಪಡೆಯುತ್ತಿದ್ದಾರೆ. 'ಮನೆಯಲ್ಲಿ ಮಹಾಮನೆ' ಎಂಬ ಕಾರ್ಯಕ್ರಮದ ಮೂಲಕ ಸಮಾಜದಲ್ಲಿ ಜಾಗೃತಿಯನ್ನು ಮೂಡಿಸುತ್ತಿದೆ. 'ಶರಣ ಸಂಸ್ಕೃತಿ ಉತ್ಸವ' ವರ್ಷಕ್ಕೊಮ್ಮೆ ನಡೆಯುತ್ತದೆ. ಪ್ರತಿ ತಿಂಗಳು ೨ನೇ ತಾರೀಖಿನಂದು 'ಶಿವಾನುಭವಗೋಷ್ಠಿ' ನಡೆಯುತ್ತಿರುತ್ತದೆ.

**ಮೈಲಾರ ಮಹದೇವಪ್ಪನವರ ವೀರಸೌಧ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೧ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧ ಕಿ.ಮೀ.



ಮೈಲಾರ ಮಹದೇವಪ್ಪನವರು ದಿನಾಂಕ: ೦೮-೦೬-೧೯೧೧ ರಂದು ಬ್ಯಾಡಗಿ ತಾಲೂಕಿನ ಮೋಟೆಬೆನ್ನೂರ ಗ್ರಾಮದ ಮಾರ್ತಾಂಡಪ್ಪ ಮತ್ತು ಬಸಮ್ಮನವರ ಗರ್ಭದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ಸ್ವಾತಂತ್ರ್ಯ ಹೋರಾಟದ ಛೀಳು ಅಂಟಿಸಿಕೊಂಡು ಗಾಂಧೀಜಿಯವರ ತತ್ವಾದರ್ಶಗಳ ಅನುಯಾಯಿಯಾಗಿದ್ದರು. ೧೯೩೦ರಲ್ಲಿ ಗಾಂಧೀಜಿಯವರು ಮಹದೇವಪ್ಪನವರನ್ನು ಸಬರಮತಿಗೆ ಕರೆಯಿಸಿಕೊಂಡರು. ಇವರು ದಂಡೀಯಾತ್ರೆಯಲ್ಲೂ ಪಾಲ್ಗೊಂಡರು.

ಹೊಸರಿತ್ತಿಯಲ್ಲಿ ಹಪ್ತೆ ಬಡೆಯುವ ಸಂದರ್ಭದಲ್ಲಿ ಮಹದೇವಪ್ಪನವರು ಹಾಗೂ ಕೊಗನೂರಿನ ವೀರಯ್ಯ ಹಿರೇಮಠ, ಕರಿಯಪ್ಪ, ಸಂಗೂರ ಸಹ ಬ್ರಿಟೀಷ್ ಪೋಲಿಸ್ ಗುಂಡಿಗೆ ಬಲಿಯಾದರು. ಈ ಮೂವರ ಸ್ಮರಣೆಗಾಗಿ ವೀರಸೌಧ ಮೈದಳೆದಿದೆ. ಮಹದೇವಪ್ಪನವರ ಧರ್ಮಪತ್ನಿ ಸ್ವಾತಂತ್ರ ಹೋರಾಟಗಾರ್ತಿ ಶ್ರೀಮತಿ ಸಿದ್ಧಮ್ಮನವರ ಸಮಾಧಿಯೂ ಸಹ ಇಲ್ಲಿಯೇ ಇದೆ.

**ಗಳಗೇಶ್ವರ ದೇವಾಲಯ, ಗಳಗನಾಥ**

ಜಿಲ್ಲಾ ಕೇಂದ್ರದಿಂದ ದೂರ :೫೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೫೦ ಕಿ.ಮೀ.

**ಶ್ರೀ ಗಳಗೇಶ್ವರ ಸ್ವಾಮಿ ದೇವಸ್ಥಾನ**



ಹಾವೇರಿಯಿಂದ ೫೦ ಕಿ.ಮೀ. ಅಂತರದಲ್ಲಿ ಇರುವ ಗಳಗನಾಥ ಒಂದು ಸುಂದರ ಪ್ರವಾಸಿ ತಾಣ. ವರದಾನದಿ ಮತ್ತು ತುಂಗಭಧ್ರಾನದಿಗಳ ಸಂಗಮ ಸ್ಥಳವಿದು. ಮಕರ ಸಂಕ್ರಾಂತಿಯಂದು ಬಹುಸಂಖ್ಯೆಯಲ್ಲಿ ಜನರು ಸೇರುತ್ತಾರೆ.
ಇಲ್ಲೊಂದು ಗಳಗೇಶ್ವರ ದೇವಾಲಯವಿದೆ. ಪ್ರಾಚೀನ ಶಿಲ್ಪ ಸಿರಿಯೇ ತಲೆ ಎತ್ತಂತಿದೆ. ಎತ್ತರ ಶಿಲಾವಿನ್ಯಾಸ ಹೊಂದಿರುವ ಈ ದೇಗುಲದ ವೈಶಿಷ್ಟ್ಯವೆಂದರೆ ಇದು ನಕ್ಷತ್ರಾಕಾರದ ತಲಾವಿನ್ಯಾಸ ಮತ್ತು ಎತ್ತರದ ಅಧಿಷ್ಠಾನ ಹೊಂದಿರುವುದಲ್ಲದೆ ಮೇಲಕ್ಕೆ ನೋಡುತ್ತಾ ಹೋದ ಹಾಗೆ ಗೋಪುರ ತುದಿಯವರೆಗೆ ಕಿರಿದಾಗುತ್ತಾ ಹೋಗುತ್ತದೆ. ಗರ್ಭಸ್ಥಳದಲ್ಲಿ ಆಳೆತ್ತರದ ಈಶ್ವರಲಿಂಗ ಪ್ರತಿಷ್ಠಾಪನೆಯಾಗಿದೆ. ಸಪ್ತಮಾತೃಕೆಯರಿದ್ದಾರೆ. ಸುಮಾರು ೧೨ ಅಡಿ ಎತ್ತರದ ಬಾಗಿಲು ವಾಡವಿದೆ. ಅಂತರಾಳದಲ್ಲಿ ಸರಸ್ವತಿ ಹಾಗೂ ಜನಾರ್ಧನರಿದ್ದಾರೆ. ನವರಂಗದಲ್ಲಿ ಆಳೆತ್ತರದ ವಿಷ್ಣು, ಗಣಪತಿ, ಸೂರ್ಯ, ಮಹಿಷಾಸುರ ಮರ್ದಿನಿ ಸೇರಿದಂತೆ ಇನ್ನೂ ಹಲವಾರು ಮೂರ್ತಿಗಳಿವೆ. ಕಲ್ಯಾಣ ಚಾಲುಕ್ಯರ ಶೈಲಿಯ ಗಳಗೇಶ್ವರ ದೇವಾಲಯವನ್ನು ಕ್ರಿ.ಶ. ೧೧೦೦ರಲ್ಲಿ ನಿರ್ಮಿಸಿರಬಹುದಾದ ದಾಖಲೆಗಳಿವೆ.

ದೇವಾಲಯದ ಆವಿಷ್ಕಾರ ಕಾಲಕ್ಕೆ ವಿಶೇಷ ಕುಸರಿ ಕೆಲಸ, ದೈನಂದಿನ ಬದುಕಿನ ಜೀವನ ಶೈಲಿ, ಯುದ್ಧ ಕಾರ್ಯಗಳ ವಿವಿಧ ಆಯಾಮಗಳು ತಂತ್ರಗಳನ್ನು ಪರಿಚಯಿಸುವ ಶಿಲ್ಪ ಕೆತ್ತನೆಗಳು ಕಂಡುಬರುತ್ತವೆ.

**ಜಿಲ್ಲಾ ಆಡಳಿತ ಭವನ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೫ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ:೫ ಕಿ.ಮೀ.



ಮಾನ್ಯ ಶ್ರೀ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಗಳಾಗಿದ್ದಾಗ ಹೊಸ ಜಿಲ್ಲೆಗಳ ಘೋಷಣೆಯಾಯಿತು. ಅವಿರತವಾಗಿ ಶ್ರಮಿಸಿದ ಅನೇಕ ಮಹನೀಯರ ಪ್ರಯತ್ನದಿಂದಾಗಿ ದಿನಾಂಕ: ೨೪-೦೮-೧೯೯೭ರಲ್ಲಿ ಹಾವೇರಿ ಪ್ರತ್ಯೇಕ ಜಿಲ್ಲೆಯಾಯಿತು.
ಹಾವೇರಿಯಲ್ಲಿ ಸರಕಾರಿ ಇಲಾಖೆಗಳು ಚದುರಿಕೊಂಡಿದ್ದವು. ಹೊಸಜಿಲ್ಲೆಗೆ ಅನೇಕ ಕಾಯಕಲ್ಪಗಳ ಬೇಡಿಕೆಯಿತ್ತು. ಜಿಲ್ಲಾಧಿಕಾರಿಗಳ ಕಛೇರಿಯ ಅವಶ್ಯಕತೆ ಇತ್ತು. ಇದನ್ನರಿತ ಸರಕಾರ ಹಾವೇರಿಗೆ ೫ ಕಿ.ಮೀ. ಅಂತರದಲ್ಲಿರುವ ದೇವಗಿರಿ ಗುಡ್ಡದ ವಿಶಾಲ ಪ್ರದೇಶದಲ್ಲಿ ಈ ಕಟ್ಟಡವನ್ನು ನಿರ್ಮಿಸಿದ್ದು, ಜಿಲ್ಲೆಯ ಬಹುತೇಕ ಸರಕಾರಿ ಕಾರ್ಯಾಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸುಂದರ ಪರಿಸರದ ಮಧ್ಯ ಮೈದಳೆದ ಈ ಕಟ್ಟಡ ಕಣ್ಮನಗಳಿಗೆ ಹರ್ಷ ತರುತ್ತದೆ. ವಿದ್ಯಾರ್ಥಿಗಳನ್ನು ಇಲ್ಲಿಗೆ ಕರೆದೊಯ್ದು ಅವರಿಗೆ ವಿವಿಧ ಇಲಾಖೆಗಳನ್ನು ಮತ್ತು ಕಛೇರಿಗಳನ್ನು ಪರಿಚಯ ಮಾಡಿಸಬಹುದಾಗಿದೆ.

**ಸಿಂದಗಿಯ ಮಠ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ.



ಸಿಂಧಗಿ ಮಠವು ಹಾವೇರಿಯ ಶಿವಬಸವ ನಗರದಲ್ಲಿ ಪೂರ್ವಾಭಿಮುಖವಾಗಿ ರೈಲ್ವೆ ನಿಲ್ದಾಣಕ್ಕೆ ಹತ್ತಿರವಿದ್ದು, ಬಸ್ ನಿಲ್ದಾಣದಿಂದ ೨ ಕಿ.ಮೀ. ಅಂತರದಲ್ಲಿದೆ.
೧೯೫೭ರಲ್ಲಿ ಈ ಮಠವನ್ನು ಪೂಜ್ಯ ಶ್ರೀ ಶಾಂತವೀರ ಪಟ್ಟಾಧ್ಯಕ್ಷರು ಸ್ಥಾಪನೆ ಮಾಡಿದ್ದಾರೆ. ಈ ಮಠದಲ್ಲೀಗ ವೈದಿಕ ಶಿಕ್ಷಣ ಪಡೆಯುವ ಸುಮಾರು ೧೦೦ ಮಂದಿ ವಟುಗಳಿದ್ದಾರೆ. ಇಲ್ಲಿ ವೈದಿಕ ಶಿಕ್ಷಣ ಪಡೆದ ವಿದ್ಯಾರ್ಥಿಗಳು ಕರ್ನಾಟಕದಾದ್ಯಂತ ಇದ್ದಾರೆ. ಸಂಸ್ಕೃತ ಪಾಠಶಾಲೆ, ಜ್ಯೋತಿಷ್ಯ, ಆಯುರ್ವೇದ ಶಿಕ್ಷಣದ ವ್ಯವಸ್ಥೆ ಇದ್ದು, ಉಚಿತ ವೈದ್ಯಕೀಯ ಶಿಬಿರಗಳನ್ನು ಇಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಗದುಗಿನ ಪೂಜ್ಯ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳ ನೇತೃತ್ವದಲ್ಲಿ ನಿತ್ಯ ದಾಸೋಹ ನಡೆಯುತ್ತಿದ್ದು, ಪ್ರತಿದಿನ ನೂರಾರು ಭಕ್ತರು ಪ್ರಸಾದ ಸೇವಿಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಉಚಿತ ವಸತಿ, ಊಟದ ವ್ಯವಸ್ಥೆಯನ್ನು ಮಾಡುತ್ತಿದ್ದು, ಇದು ಗ್ರಂಥಾಲಯ ಮತ್ತು ಧ್ಯಾನಮಂದಿರವನ್ನು ಹೊಂದಿದೆ. ಪ್ರತಿವರ್ಷ ಕೀರ್ತನೆ, ಪುರಾಣ, ಸಾಂಸ್ಕೃತಿಕ ಕಾರ್ಯಕ್ರಮ, ಸಾಹಿತ್ಯ ಬೆಳವಣಿಗೆ ಮೂಲಕ ಜನರಲ್ಲಿ ಧಾರ್ಮಿಕ, ನೈತಿಕ ಸಾಂಸ್ಕೃತಿಕ ಪರಂಪರೆಯನ್ನು ಬಿತ್ತುತ್ತಾ ಪೂಜ್ಯ ಶಾಂತವೀರ

ಪಟ್ಟಾಧ್ಯಕ್ಷರ ತತ್ವಾದರ್ಶಗಳ ಘನತೆಯನ್ನು ಎತ್ತಿ ಹಿಡಿದಿದೆ. ಸಾವಿರಾರು ಭಕ್ತ ಸಮೂಹದ ಮನಸೆರೆ ಹಿಡಿಯುವ ಸಿಂದಗಿಮಠ ಒಂದು ಪವಿತ್ರಯಾತ್ರಾ ಸ್ಥಳವಾಗಿದೆ.

**ಹುಕ್ಕೇರಿಮಠ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ.



**ಹುಕ್ಕೇರಿಮಠ**

ಹಾವೇರಿಗೆ ಕಳಸಪ್ರಾಯವಾದ ಶ್ರೀ ಹುಕ್ಕೇರಿಮಠವು ಕಳೆದ ೩೦೦ ವರ್ಷಗಳ ಹಿಂದೆ ಪರಮಪೂಜ್ಯ ಶ್ರೀ ರಾಜೋಟಿ ಸ್ವಾಮಿಗಳಿಂದ ಸ್ಥಾಪಿಸಲ್ಪಟ್ಟು ಕುಮಾರ ಸಮಯದ ಸಂಪ್ರದಾಯದಲ್ಲಿ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಜನ ಸಮೂಹದ ಉದ್ಧಾರಕ್ಕಾಗಿ ಮಾಡುತ್ತಾ ಬಂದಿದೆ. ವೀರಶೈವ ಧರ್ಮದ ತತ್ವಾದರ್ಶಗಳನ್ನು ಎತ್ತಿ ಹಿಡಿದು ತನ್ನ ಪ್ರಭಾವವನ್ನು ಭಕ್ತ ಸಮೂಹದಲ್ಲಿ ಬಿತ್ತಿದೆ.

ಶ್ರೀ ಮಠದಲ್ಲಿ ಪರಮಪೂಜ್ಯ ಶ್ರೀ ರಾಜೋಟಿ ಸ್ವಾಮಿಗಳ, ಶ್ರೀ ಶಿವಬಸವ ಸ್ವಾಮಿಗಳ ಮತ್ತು ಪೂಜ್ಯ ಶ್ರೀ ಶಿವಲಿಂಗ ಮಹಾಸ್ವಾಮಿಗಳ ಕತೃ ಗದ್ದುಗೆಗಳಿವೆ.
ಶ್ರೀ ಮಠದ ಪರಂಪರೆಯಲ್ಲಿ ಶ್ರೀ ಮ.ನಿ.ಪ್ರ. ರಾಜೋಟಿ ಸ್ವಾಮಿಗಳು. ಪರಮಪೂಜ್ಯ ಬಸವಲಿಂಗ ಸ್ವಾಮಿಗಳು, ಪೂಜ್ಯ ಶ್ರೀ ಸಿದ್ದಲಿಂಗ ಸ್ವಾಮಿಗಳು, ಪೂಜ್ಯ ಶ್ರೀ ಶಿವಬಸವ ಸ್ವಾಮಿಗಳು ಮತ್ತು ಪೂಜ್ಯ ಶ್ರೀ ಶಿವಲಿಂಗ ಸ್ವಾಮಿಗಳು ಪಟ್ಟಾಧಿಕಾರ ಪಡೆದು ಆಳಿಬಾಳಿ ಶಿವಾಧೀನರಾಗಿದ್ದಾರೆ.
ಶ್ರೀಮಠದಲ್ಲಿ ಪ್ರಾಥಮಿಕ ಶಾಲೆ, ಪ್ರೌಢಶಾಲೆ, ಪದವಿಪೂರ್ವ ಕಾಲೇಜು, ಪದವಿ ಕಾಲೇಜು, ಡಿ.ಇಡಿ. ಕಾಲೇಜುಗಳಿದ್ದು, ಸಾವಿರಾರು ಮಕ್ಕಳಿಗೆ ಶಿಕ್ಷಣವನ್ನು ನೀಡುತ್ತಿದೆ.

**ಸಂಗೂರ ಸಕ್ಕರೆ ಕಾರ್ಖಾನೆ, ಹಾವೇರಿ**

ಜಿಲ್ಲಾ ಕೇಂದ್ರದಿಂದ ದೂರ : ೧೨ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೨ ಕಿ.ಮೀ.



ಸಂಗೂರ ಸಕ್ಕರೆ ಸಹಕಾರಿ ಕಾರ್ಖಾನೆ

ಹಾವೇರಿ – ಹಾನಗಲ್ಲ ರಸ್ತೆಯಲ್ಲಿ ೧೨ ಕಿ.ಮೀ. ಸಾಗಿದರೆ ಈ ಸಕ್ಕರೆ ಕಾರ್ಖಾನೆ ನಮಗೆ ಕಾಣಸಿಗುತ್ತದೆ. ೧೭೯ ಎಕರೆ ಭೂಮಿ ವಿಸ್ತೀರ್ಣದಲ್ಲಿ ಇದು ದಿನಾಂಕ: ೨೮.೧೨.೧೯೮೩ ರಲ್ಲಿ ಅಂದಿನ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆಯವರ ಅಮೃತ ಹಸ್ತದಿಂದ ಉದ್ಘಾಟನೆಗೊಂಡಿದೆ.

ದಿನಮೊಂದಕ್ಕೆ ೧೨೫೦ ಟನ್ ಕಬ್ಬು ನುರಿಸುವ ಸಾಮರ್ಥ್ಯ ಹೊಂದಿರುವ ಈ

ಕಾರ್ಖಾನೆ ಈಗ ನಾವಿನ್ಯತೆಯಿಂದಾಗಿ ೨೨೫೦ ಟನ್ ಕಬ್ಬನ್ನು ಒಂದು ದಿನಕ್ಕೆ ನುರಿಸುವ ಸಾಮರ್ಥ್ಯ ಹೊಂದಲಿದೆ.

ನೂರಾರು ಹೆಕ್ಟೇರ್ ಕಬ್ಬು ಬೆಳೆಯುವ ಅವಕಾಶ ಹಾವೇರಿ ಜಿಲ್ಲೆಯ ರೈತರಿಗೆ ದೊರಕಿದ್ದು, ಅಂದಾಜು ೩೦೦ ಜನರು ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಕಾರ್ಖಾನೆಯ ಕೆಲಸಕಾರ್ಯ ಹಾಗೂ ಸಕ್ಕರೆ ತಯಾರಾಗುವ ವಿಧಾನದ ಬಗ್ಗೆ ಮಾಹಿತಿಯನ್ನು ತಿಳಿಸಲು ಇದೊಂದು ಉತ್ತಮವಾದ ಶೈಕ್ಷಣಿಕ ಸ್ಥಳ.

**ಶ್ರೀ ಸೋಮೇಶ್ವರ ದೇವಾಲಯ, ಹರಳಹಳಿ**

ಜಿಲ್ಲಾ ಕೇಂದ್ರದಿಂದ ದೂರ :೩೨ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೩೨ ಕಿ.ಮೀ.



**ಶ್ರೀ ಸೋಮೇಶ್ವರ ದೇವಸ್ಥಾನ**
ಸೋಮೇಶ್ವರ ದೇವಾಲಯ ಹಾವೇರಿ ತಾಲೂಕಿನ ಹರಳಹಳ್ಳಿಯ ಪ್ರಾಚೀನ ಶಿಲ್ಪಸಂಪತ್ತು ಹೊಂದಿರುವ ವೈಶಿಷ್ಯಪೂರ್ಣ ದೇವಾಲಯ. ತ್ರಿಕೂಟಾಚಲ ದೇವಾಲಯವಿದು. ಮೂರು ಗರ್ಭಗೃಹ, ಮೂರು ಅಂತರಾಳವಿರುವ ಈ ದೇಗುಲ ಒಂದೇ ಒಂದು ವಿಶಾಲ ಹರವಿನ ನವರಂಗ ಹೊಂದಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಮೂರು ಗರ್ಭಗೃಹಗಳಲ್ಲಿ ಪ್ರತ್ಯೇಕ ಮೂರು ಈಶ್ವರ ಲಿಂಗಗಳಿವೆ. ದೇವಾಲಯದ ಸುತ್ತಲೂ ಮಧ್ಯಬಾಗದಲ್ಲಿ ನಿರ್ದಿಷ್ಟ ಅಂತರದಲ್ಲಿ ಚಿಕ್ಕ ಚಿಕ್ಕ ಗೂಡುಗಳಿವೆ. ಇದು ಕಲ್ಯಾಣ ಚಾಳುಕ್ಯರ ದೇವಾಲಯ ನಿರ್ಮಿಸುವ ಶೈಲಿಯಲ್ಲಿ ನಿರೂಪಿಸಲ್ಪಡುತ್ತವೆ. ಹೊಯ್ಸಳರ ಲಾಂಛನವಿರುವುದರಿಂದ ರಾಜಾಡಳಿತ ವಂಶದಿಂದ ವಂಶಕ್ಕೆ ಹಸ್ತಾಂತರಗೊಂಡಂತೆ ಪ್ರತಿ ರಾಜವಂಶಸ್ಥರು ತಮ್ಮ ಕುರುಹು ಬೀರುವ ಶಿಲ್ಪ ರಚನೆಗಳನ್ನು ಸೇರಿಸಿರಬಹುದಾದ ಉಲ್ಲೇಖಗಳನ್ನು ಈ ದೇವಾಲಯದ ಇತಿಹಾಸದಲ್ಲಿಯೂ ಗುರುತಿಸಬಹುದಾಗಿದೆ.

ತುಂಗಾಭದ್ರ ನದಿದಡದ ಮೇಲೆ ನಿರ್ಮಿತವಾಗಿರುವ ಸೋಮೇಶ್ವರ ದೇವಾಲಯದಲ್ಲಿ ಹೊಯ್ಸಳ ಲಾಂಛನವಿರುವುದರಿಂದ ಹೊಯ್ಸಳ ಶೈಲಿಯ ದೇವಾಲಯವೆಂದೂ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಇದರ ಶಿಲ್ಪ ಸೌಂದರ್ಯ ಅದ್ಭುತವಾಗಿದೆ. ಗರ್ಭಗುಡಿಯ ಬಾಗಿಲು ಉತ್ತಮ ಆಭರಣಗಳಿಂದ ಅಲಂಕಾರ ಮಾಡಲ್ಪಟ್ಟ ಪರಡೆರೂಪದ ಕೆತ್ತನೆಯನ್ನು ಹೊಂದಿದೆ. ಶಿಲ್ಪಗಳ ತಂತ್ರ ಕೌಶಲ್ಯ ಶ್ಲಾಘನೀಯ. ಕ್ರಿ.ಶ. ೧೨೧೩ರಲ್ಲಿ ಇದು ನಿರ್ಮಾಣಗೊಂಡಿದೆ. ದೇವಾಲಯದ ಹೊರ ಮೈಮೇಲೆ ಹಲವಾರು ದೇವತೆಗಳ ವಿಶಿಷ್ಟ ಭಂಗಿಯ ಕೆತ್ತನೆಗಳು ಕಣ್ಮನವನ್ನು ಸೆಳೆಯುತ್ತವೆ. ಈ ದೇವಾಲಯವು ಹಾವೇರಿ – ಹೊಸಪೇಟೆಯ ರಸ್ತೆಯಲ್ಲಿರುವ ಗುತ್ತಲದಿಂದ ಮುಂದಿದೆ.

## ಹಾವೇರಿ ಜಿಲ್ಲೆಯ ಪಕ್ಷಿನೋಟ

ಮೂಲತಃ ಧಾರವಾಡವನ್ನು ೧೯೯೭ರಲ್ಲಿ ವಿಭಜಿಸಿ ಹಾವೇರಿ ಜಿಲ್ಲೆಯನ್ನು ರಚಿಸಲಾಯಿತು. ಹಾವೇರಿ ಜಿಲ್ಲೆಯು ಏಳು ತಾಲೂಕುಗಳನ್ನು ಅಂದರೆ ಹಾವೇರಿ, ರಾಣೇಬೆನ್ನೂರು, ಹಿರೇಕೆರೂರು, ಶಿಗ್ಗಾಂವ, ಬ್ಯಾಡಗಿ, ಹಾನಗಲ್ ಮತ್ತು ಸವಣೂರು ತಾಲೂಕುಗಳನ್ನು ಒಳಗೊಂಡಿರುತ್ತದೆ. ಹಾವೇರಿಯ ಪೂರ್ವ ರೇಖಾಂಶ ೭೫.೦೭ ಯಿಂದ ೭೫.೩೮ ಮತ್ತು ಉತ್ತರ ಅಕ್ಷಾಂಶ ೧೪.೨೮ ರಿಂದ ೧೪.೫೯.

ಜಿಲ್ಲೆಯ ಒಟ್ಟು ವಿಸ್ತೀರ್ಣ ೪೮೪೮ ಚ.ಕಿ.ಮೀ. ಜಿಲ್ಲೆಯ ಒಟ್ಟು ಗ್ರಾಮಗಳು ೬೯೧ ಇರುತ್ತದೆ. ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೪೮೫೧೫೬ ಹೆಕ್ಟೇರ್ ಇರುತ್ತದೆ. ಈ ಪೈಕಿ ನೀರಾವರಿಗೆ ಒಳಪಟ್ಟ ಪ್ರದೇಶ ೫೧೦೦೨ ಹೆಕ್ಟೇರ್ ಇರುತ್ತದೆ.

ಜಿಲ್ಲೆಯ ವಾರ್ಷಿಕ ಸರಾಸರಿ ವಾಡಕೆ ಮಳೆಯು ೭೫೨.೮ ಮಿ.ಮೀ. ಆಗಿರುತ್ತದೆ. ಜಿಲ್ಲೆಯ ಪ್ರಮುಖ ಬೆಳೆಗಳೆಂದರೆ – ಜೋಳ, ಹತ್ತಿ, ಮೆಣಸಿನಕಾಯಿ, ಭತ್ತ, ಕಬ್ಬು, ಗೋವಿನಜೋಳ ಮತ್ತು ಎಣ್ಣೆ ಬೀಜಗಳು ಅಲ್ಲದೆ ದ್ವಿದಳ ಧಾನ್ಯಗಳು. ೨೦೦೧ನೇಯ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೧೪,೩೯,೧೧೬ ಇರುತ್ತದೆ. ಈ ಪೈಕಿ ೭,೪೦,೪೬೯ ಗಂಡಸರು ಹಾಗೂ ೬,೯೮,೬೪೭ ಹೆಂಗಸರು ಇರುತ್ತಾರೆ.

ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಾಡ ಗ್ರಾಮದಲ್ಲಿ ಜನಿಸಿದ ಕನಕದಾಸರು ಕಾಗಿನೆಲೆಯಾದಿ ಕೇಶವನ ನಾಮದಲ್ಲಿ ದಾಸಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ತ್ರಿಪದಿ ಜನಕನಾದ ಸರ್ವಜ್ಞನು ಹಿರೇಕೆರೂರು ತಾಲೂಕಿನ ಅಬಲೂರಿನಲ್ಲಿ ಜನಿಸಿ ಲೋಕವಿಖ್ಯಾತನಾಗಿದ್ದಾನೆ. ಧಾರ್ಮಿಕ ಭಾವೈಕ್ಯದಿಂದ ಮೆರೆದ ಸಂತ ಶಿಶುನಾಳ ಷರೀಫರು ಶಿಗ್ಗಾಂವ ತಾಲೂಕಿನ ಶಿಶುವಿನಹಾಳ ಗ್ರಾಮದಲ್ಲಿ ಜನಿಸಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಬಿಚಟ್ಮಿ◌೦g◌೦ ವಿರುದ್ಧ ಬಂಡೆದ್ದ ಮೋಟೆಬೆನ್ನೂರಿನ ಮೈಲಾರ ಮಹದೇವಪ್ಪನವರು, ಹೊಸರಿತ್ತಿಯ ಗುದ್ಲೆಪ್ಪಾ ಹಳ್ಳಿಕೇರಿ, ಮಡಿವಾಳರು, ಸಂಗೂರಿನ ಯರೆಶೀಮಿ ಕರಿಯಪ್ಪನವರು ಜಿಲ್ಲೆಯ ಧೃವತಾರೆಗಳು. ಹಿರಿಯ ಪತ್ರಕರ್ತರು, ಕನ್ನಡ ಹೋರಾಟಗಾರರು ಆದ ಪಾಟೀಲ ಪುಟ್ಟಪ್ಪನವರು ಹಾಗೂ ಸಾಹಿತ್ಯ ಲೋಕಕ್ಕೆ ಅಗಾಧ ಕೊಡುಗೆ ನೀಡಿದ ಶ್ರೀ ಗಳಗನಾಥರು, ಶ್ರೀ ಮಹದೇವ ಬಣಕಾರರು, ಸರ್ವೋದಯ ನೇತಾರ ವಿನೋಬಾ ಭಾವೆ, ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಯನ್ನು ಜಿಲ್ಲೆಗೆ ತಂದುಕೊಟ್ಟಂತಹ ವಿನಾಯಕ ಗೋಕಾಕರು ಇನ್ನೂ ಮುಂತಾದವರು ಜಿಲ್ಲೆಯ ಹೆಮ್ಮೆಯ ಪುತ್ರರು. ರಾಜ್ಯ ಪ್ರಶಸ್ತಿಯನ್ನು ಪಡೆದಿರುವ ಪಟವೆಗಾರ ಮನೆತನದವರು ಯಾಲಕ್ಕಿಯನ್ನು ಸರ ಮಾಡಿ ಮಾರಾಟ ಮಾಡುವ ಶ್ರಮಿಕ ವರ್ಗದವರು. ಒಂದರಿಂದ ಎಳೆಯಿಂದ ಇಪ್ಪತ್ತು ಎಳೆಯವರೆಗೂ ಯಾಲಕ್ಕಿ ಮಾಲೆಯನ್ನು ತಯಾರಿಸುತ್ತಾರೆ.

## ಸವಣೂರು ತಾಲೂಕು

**ದೊಡ್ಡ ಹುಣಸೆಮರ, ಸವಣೂರು**

ಜಿಲ್ಲಾ ಕೇಂದ್ರದಿಂದ ದೂರ :೨೨ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ:೦ ಕಿ.ಮೀ.



ಆಫ್ರಿಕಾ ಖಂಡದವುಗಳೆನ್ನಲಾದ ಸುಮಾರು ೧೫ ಮೀ. ಸುತ್ತಳತೆಯ ದೊಡ್ಡ ಹುಣಸೆ ವೃಕ್ಷಗಳು ಸವಣೂರಿನ ಮುಖ್ಯ ಆಕರ್ಷಣೆ.

ಈ ಹುಣಸೆಮರಗಳು ಸುಮಾರು ೩೦೦೦ ವರ್ಷ ಹಳೆಯವು.ಇವುಗಳನ್ನು ಶ್ರೀ ಕೃಷ್ಣನು ತಂದು ಇಲ್ಲಿ ಹಚ್ಚಿದನೆನ್ನಲಾಗಿದೆ. ಇವು ಹೆಮ್ಮರವಾಗಿ ಬೆಳೆದುನಿಂತು ಪ್ರಕೃತಿಯ ಸೊಬಗಿನಲ್ಲಿ ರಾರಾಜಿಸುತ್ತವೆ. ಈ ಮರಗಳ ಮೇಲಿನ ಹಕ್ಕಿಗಳ ಕೂಗು ಸದಾ ಕೇಳಿ ಬರುತ್ತಿರುತ್ತದೆ. ಸುಂದರ ವನದಂತಿರುವ ಹಾಗೂ ಪ್ರಶಾಂತವಾಗಿರುವ ಈ ಸ್ಥಳವು ನೋಡಲು ಆಕರ್ಷಣೀಯವಾಗಿದೆ ಈ ಮರಗಳ ಹತ್ತಿರದಲ್ಲಿ ಕಲ್ಮೇಶ ಮಠವಿದೆ.

**ನವಾಬರ ಪ್ರಸಿದ್ಧ ಅರಮನೆ, ಸವಣೂರು**

ಜಿಲ್ಲಾ ಕೇಂದ್ರದಿಂದ ದೂರ : ೨೨ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ.



ನವಾಬನ ಕಾಲದ ಅರಮನೆ, ಈಗಿನತಾಲೂಕ ಪಂಚಾಯತ್ ಕಛೇರಿ

ಸವಣೂರು ಹಳೆಯ ಕಾಲದಿಂದಲೂ ನವಾಬರ ಅಧಿಪತ್ಯಕ್ಕೆ ಒಳಪಟ್ಟ ಸ್ಥಳವಾಗಿತ್ತು. ಸಂಸ್ಥಾನಗಳ ವಿಲೀನಿಕರಣದಿಂದ ಸವಣೂರು ಸ್ವತಂತ್ರವಾಯಿತು. ಇಲ್ಲಿ ಸವಣೂರು ನವಾಬರ ಪ್ರಸಿದ್ಧವಾದ ದರ್ಬಾರ್ ಹಾಲು ಮತ್ತು ಸುಪ್ರಸಿದ್ಧ ಹಳೆಯ ಅರಮನೆಯಿದೆ. ಈ ಅರಮನೆ ವಿಶಾಲವಾಗಿದ್ದು, ಪಕ್ಕದಲ್ಲಿ ಈಜುಕೊಳ ಹಾಗೂ ಮಖಾನ್ ಇದೆ. ಸುತ್ತಲೂ ಮರಗಳು ಬೆಳೆದು ನಿಂತಿವೆ.

ವಜೀದಖಾನ್ ನವಾಬರು ಒಮ್ಮೆ ಕರಾಚಿಯಲ್ಲಿ ಸಿಹಿ ಮತ್ತು ಖಾರವನ್ನು ಸವಿಯುವ ಸಮಯ ಬಂದಿತು. ಗುಜರಾತಿನ ರಾಜಕೋಟದ ಶಿವಲಾಲ ಕೋಟಕ್ ಎಂಬುವವರ ಅಂಗಡಿಯಲ್ಲಿ ಹಲ್ವಾ ಮತ್ತು ಖಾರವನ್ನು ನವಾಬರ ತರಿಸಿ ರುಚಿ ಕಂಡ ಮರುದಿನವೇ ಅವರನ್ನು ಕರೆಯಿಸಿ ತಮ್ಮ ಜನತೆಗೆ ಸಿಹಿ ತಿಂಡಿ ಮತ್ತು ರುಚಿಕಟ್ಟಾದ ಖಾರದ ರುಚಿ ತೋರಿಸಬೇಕು ಎಂದು ಆಹ್ವಾನಿಸಿದರು. ಅವರ ಆಹ್ವಾನದ ಮೇರೆಗೆ ಶಿವಲಾಲರು ಸುಮಾರು ೧೯೩೨ ರಲ್ಲಿ ಸವಣೂರಿಗೆ ಬಂದು ನೆಲೆಸಿ ತಮ್ಮ ಶ್ರದ್ಧೆ, ನಿಷ್ಠೆ ಶ್ರಮಗಳ ಜೊತೆಗೆ ಪಾಕ ಕೈಚಳಕವನ್ನು ಈ ನಾಡಿನ ಜನತೆಗೆ ತೋರಿಸಿದ್ದಾರೆ. ಈಗಲೂ ಸವಣೂರಿನ ಶಿವಲಾಲ್‌ಖಾರ ಎಂದರೆ ಎಲ್ಲರ ಬಾಯಿಯಲ್ಲಿ ನೀರೂರುತ್ತದೆ.

## ಶಿಗ್ಗಾಂವ ತಾಲೂಕು

**ನಗರೇಶ್ವರ ದೇವಸ್ಥಾನ, ಬಂಕಾಪುರ**

ಜಿಲ್ಲಾ ಕೇಂದ್ರದಿಂದ ದೂರ : ೨೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೨ ಕಿ.ಮೀ.



**ಶ್ರೀ ನಗರೇಶ್ವರ ದೇವಸ್ಥಾನ**

ಮಹಾಕವಿ ರನ್ನನ ಕರ್ಮಭೂಮಿಯಾದ ಬಂಕಾಪುರದಲ್ಲಿ ಕದಂಬ ಶೈಲಿಯ ನಗರೇಶ್ವರ ದೇವಸ್ಥಾನವಿದೆ. ಈ ದೇವಸ್ಥಾನವು ೬೬ ಕಂಬಗಳನ್ನು ಹೊಂದಿದ್ದು, ನೋಡಲು ಮನಮೋಹಕವಾಗಿದೆ. ಪ್ರಸಿದ್ಧ ಗವಿಯೂ ಇದೆ. ಈ ಗವಿಯು ಒಳಗಿನಿಂದ ಸುರಂಗಮಾರ್ಗವನ್ನು ಹೊಂದಿದ್ದು, ಹಾನಗಲ್‌ನ ತಾರಕೇಶ್ವರ ದೇವಸ್ಥಾನಕ್ಕೆ ಮಾರ್ಗವನ್ನು ಹೊಂದಿದೆ.

ಭಾರತೀಯ ಪುರಾತತ್ವ ಇಲಾಖೆಯ ಮಾನ್ಯತೆ ಪಡೆದ ಈ ಸ್ಥಳವು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತದೆ. ಬಂಕಾಪುರವು ೧೯೪೨ರ ವರೆಗೆ ತಾಲೂಕಾ ಕೇಂದ್ರವಾಗಿತ್ತು. ನಂತರದಲ್ಲಿ ಶಿಗ್ಗಾಂವ ತಾಲೂಕಾ ಕೇಂದ್ರವಾಗಿದೆ.ಬಂಕಾಪುರವು ಕಾಲಕಾಲಕ್ಕೆ ಈ ಕೆಳಕಂಡ ರಾಜಮನೆತನಗಳ ಆಡಳಿತಕೊಳ್ಳಪಟ್ಟಿತ್ತು.

೧)ರಾಷ್ಟ್ರಕೂಟರು ೨) ಸಮಂತ ಚನ್ನಕೇತನರು ೩) ಕಲ್ಯಾಣದ ಚಾಲುಕ್ಯರು ೪)ಗೋವೆಯ ಕದಂಬರು ೫) ಬನವಾಸಿ ಕದಂಬರು ೬) ಮಂಡಲೇಶ್ವರದ ಕಲಿಯಮರಸರು ೭) ಹೊಯ್ಸಳರು ೮) ವಿಜಯನಗರದ ಬಹಮನಿ ಅರಸರು ೯)ಕೆಳದಿ ಅರಸರು ೧೦) ಬಿಜಾಪುರ ೧೧) ಹೈದರಾಲಿ ಟಿಪ್ಪುಸುಲ್ತಾನ ೧೨) ಹಂಡೆ ಪಾಳೆಗಾರರು ೧೩) ನರಗುಂದ ಸಂಸ್ಥಾನ.

**ನವಿಲುಧಾಮ, ಬಂಕಾಪುರ**

ಜಿಲ್ಲಾ ಕೇಂದ್ರದಿಂದ ದೂರ : ೨೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ : ೧೨ ಕಿ.ಮೀ.



ಬಂಕಾಪುರದಲ್ಲೊಂದು ನವಿಲುಧಾಮವಿದ್ದು, ಇಲ್ಲಿ ಹೇರಳವಾಗಿ ನವಿಲುಗಳು ವಾಸವಾಗಿವೆ.

ಸುಮಾರು ೧೫೦ ಎಕರೆಯಷ್ಟು ವಿಸ್ತಾರವನ್ನು ಹೊಂದಿದ ಈ ನವಿಲು ಧಾಮದಲ್ಲಿ ವಿವಿಧ ಬಣ್ಣದ ನವಿಲುಗಳಿವೆ. ಅಲ್ಲದೇ ಮೊಲಗಳೂ ಇವೆ. ಇಲ್ಲಿ ಮೊಲಗಳ ಸಾಕಾಣಿಕೆ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಹಲವಾರು ತಳಿಯ ಮೊಲಗಳು ನೋಡಲು ಸಿಗುತ್ತವೆ.

ಬಂಕಾಪುರ ಕೋಟೆ, ನಗರೇಶ್ವರ ದೇವಸ್ಥಾನ ಹಾಗೂ ನವಿಲುಧಾಮ ನೋಡಲು ಒಂದೇ ಕಡೆಗೆ ಸಿಗುತ್ತವೆ. ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಈ ನವಿಲುಧಾಮವಿದ್ದು, ನೋಡುಗರನ್ನು ಆಕರ್ಷಿಸುತ್ತಿದೆ.

**ಶಿಶುನಾಳ ಶರೀಫರ ಗದ್ದುಗೆ, ಶಿಶುನಾಳ**

ಜಿಲ್ಲಾ ಕೇಂದ್ರದಿಂದ ದೂರ : ೪೬ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೨೦ ಕಿ.ಮೀ.



ಶ್ರೀ ಶಿಶುನಾಳ ಶರೀಫರ ಗದ್ದುಗೆ
ಹಾಡುಗಳ ಮೂಲಕ ಬದುಕಿನಲ್ಲಿ ಮಾನವನಲ್ಲಿರಬೇಕಾದ ನೈತಿಕತೆಯನ್ನು ತಿಳಿಸುತ್ತಾ ಬದುಕಿನ ಶೈಲಿಯನ್ನು ತಿದ್ದಲು ಪ್ರಯತ್ನ ಮಾಡಿದ ಸಂತ ಶಿಶುನಾಳ ಶರೀಫರ ಗದ್ದುಗೆ ಹಾಗೂ ದೇವಸ್ಥಾನವು ಶಿಶುನಾಳ ಗ್ರಾಮದಲ್ಲಿದೆ.

“ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿ ನಿನ್ನದಲ, ನಿನ್ನೊಡವೆ

ಜ್ಞಾನರತ್ನ" ಎಂದು ಅಲ್ಲಮಪ್ರಭುಗಳು ಮತ್ತು ಶರೀಫರು ಜೀವನದಲ್ಲಿ ವೈರಾಗ್ಯವನ್ನು ತಾಳಿದರು. ಇಂತಹ ಮಹಾತ್ಮರ ತತ್ವದಪದಗಳನ್ನು ಅರ್ಥ ಮಾಡಿಕೊಂಡರೆ ಮಾನವರ ಜನ್ಮ ಸಾರ್ಥಕ.

ಶಿಶುನಾಳದಲ್ಲಿ ಪ್ರತಿವರ್ಷವೂ ವಿಜೃಂಭಣೆಯಿಂದ ಜಾತ್ರೆ ಜರುಗುತ್ತದೆ. ಈ ಜಾತ್ರೆ ಹಾಗೂ ದೇವಸ್ಥಾನಗಳ ವಿಶೇಷವೆಂದರೆ ಇಲ್ಲಿ ಹಿಂದೂ-ಮುಸ್ಲಿಂ ಜನರು ಐಕ್ಯತಾಭಾವದಿಂದ ಭಾಗವಹಿಸುತ್ತಾರೆ. ಧರ್ಮ, ಜಾತಿಗಳ ನಡುವಿನ ಅಂತರವನ್ನು ತೊಡೆದುಹಾಕುವಲ್ಲಿ ಇಂತಹ ದೇವಸ್ಥಾನಗಳು ಪ್ರಮುಖ ಪಾತ್ರವಹಿಸುತ್ತವೆ.

**ಕನಕ ಬಾಡ**

ಜಿಲ್ಲಾ ಕೇಂದ್ರದಿಂದ ದೂರ : ೨೫ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೫ ಕಿ.ಮೀ.



ದಾಸ ಶ್ರೇಷ್ಠರಾದ ಕನಕದಾಸರು ಹುಟ್ಟಿದ್ದು ಕುರುಬ ಜಾತಿಯಲ್ಲಾದರೂ ಹರಿಯ ಸಾಕ್ಷಾತ್ಕಾರ ಪಡೆದು ಹರಿದಾಸರೆನಿಸಿದರು. ನೂರಾರು ಕೀರ್ತನೆಗಳು, ಹರಿಭಕ್ತಿಸಾರ, ನಳಚರಿತ್ರೆ, ರಾಮಧಾನ್ಯ ಚರಿತ್ರೆ ಹಾಗೂ ಮೋಹನ ತರಂಗಿಣಿ ಎಂಬ ಕಾವ್ಯಗಳನ್ನು ರಚಿಸಿದರು.
ಕನಕದಾಸರ ಜನ್ಮಸ್ಥಳ ಕರ್ನಾಟಕ ರಾಜ್ಯದ ಮದ್ಯಭಾಗದಲ್ಲಿರುವ ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಾಡ ಎಂಬ ಗ್ರಾಮವಾಗಿದೆ. ಕರ್ನಾಟಕ ಘನ ಸರ್ಕಾರವು ಪ್ರತಿ ವರ್ಷ ಕನಕಜಯಂತಿಯ ನಿಮಿತ್ತ ಸಾರ್ವತ್ರಿಕ ರಜೆ ಘೋಷಿಸಿದೆ.
ಬಾಡ ಗ್ರಾಮಕ್ಕೆ ಹೋಗಬೇಕಾದರೆ ಬಂಕಾಪುರದಿಂದ ಹೋಗಬೇಕು. 'ಕನಕ ಬಾಡ' ಎಂದೇ ಪ್ರಸಿದ್ಧಿಯನ್ನು ಪಡೆದ ಈ ಗ್ರಾಮ ಪ್ರವಾಸಿಗರನ್ನು ಆಕರ್ಷಿಸುತ್ತದೆ.

**ಶ್ರೀ ಗಾಯತ್ರಿ ತಪೋಭೂಮಿ, ತಡಸ**

ಜಿಲ್ಲಾ ಕೇಂದ್ರದಿಂದ ದೂರ : ೫೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೨೦ ಕಿ.ಮೀ.



ಶ್ರೀ ಗಾಯತ್ರಿ ತಪೋವನ
ಗಾಯತ್ರಿ ತಪೋಭೂಮಿಯ ಮಹಾಪುರುಷರಾದ ಶ್ರೀ ವಲ್ಲಭ ಚೈತನ್ಯ ಸದ್ಗುರುಗಳು ಮಹಾಮಂತ್ರವಾದ ಗಾಯತ್ರಿ ಮಂತ್ರದ ಅನುಷ್ಠಾನದ ಮಹತ್ವವನ್ನು ಇಡೀ ದೇಶಾದ್ಯಂತ ಜನರಿಗೆ ತಿಳಿಸಿಕೊಟ್ಟಿದ್ದಾರೆ.

ಭಕ್ತರ ವರದಾಯಿಯಾದ ವೇದಮಾತೆ ಎಂದು ವೇದದಲ್ಲಿ ವರ್ಣಿಸಲ್ಪಟ್ಟಿರುವ ಶ್ರೀ ಗಾಯತ್ರಿ ಮಾತೆಯ ಸುಂದರವಾದ ದೇವಸ್ಥಾನವನ್ನು ನಿರ್ಮಿಸಿ, ನಿತ್ಯ ತ್ರಿಕಾಲ ಪೂಜಾ, ಭಜನೆ, ಆರತಿಯಿಂದ ಆರಾಧಿಸಲ್ಪಡುವ ತೇಜಃಪುಂಜವಾದ ಶ್ರೀ ಗಾಯತ್ರಿ ಮಾತೆಯನ್ನು ಅತ್ಯಂತ ವೈಭವದಿಂದ ಶ್ರೇಷ್ಠ ವೈದಿಕ ವೃಂದದಿಂದ ಅನೇಕ ಮಹಾತ್ಮರ ಹಾಗೂ ಅಸಂಖ್ಯಾತ ಭಕ್ತಜನರ ಜೈಕಾರದ ಮಧ್ಯೆ ೨೦೦೦ ನೇ ಇಸ್ವಿ

ಫೆಬ್ರುವರಿಯಲ್ಲಿ ಸ್ಥಾಪನೆ ಮಾಡಿದರು. ಶ್ರೀ ಗಾಯತ್ರಿ ಮಾತೆಯ ಮೂರ್ತಿಯೊಂದಿಗೆ, ಶ್ರೀ ಗಣೇಶ, ಶ್ರೀ ಸುಬ್ರಮಣ್ಯ, ಶ್ರೀ ಅನ್ನಪೂರ್ಣೇಶ್ವರಿ ದೇವತೆಗಳ ಮೂರ್ತಿಗಳನ್ನೂ ಸ್ಥಾಪಿಸಲಾಗಿದೆ. ದೇಶದ ಎಲ್ಲಾ ಕಡೆಗಳಿಂದ ಭಕ್ತ ಜನರು ಬಂದು ದೇವತೆಯ ಕೃಪಾಶೀರ್ವಾದಕ್ಕೆ ಪಾತ್ರರಾಗುತ್ತಿದ್ದಾರೆ.

## ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ

"ಚೆಣ್ಣರ ಜಿಲ್ಲಾ ದರ್ಶನ"
**ವಿದ್ಯಾರ್ಥಿಗಳಿಗೆ ಉಚಿತ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮ**

**ಪ್ರವಾಸದ ಪ್ರಾಮುಖ್ಯತೆ**
ಅನುಭವಗಳ ಮೂಲಕ ಪಡೆದ ಶಿಕ್ಷಣವೇ ಶ್ರೇಷ್ಠಮಟ್ಟದ ಶಿಕ್ಷಣ. ಈ ಶೈಕ್ಷಣಿಕ ಪ್ರವಾಸದ ಉದ್ದೇಶಗಳು ಈ ಕೆಳಕಂಡಂತಿವೆ.
೧) ವಿದ್ಯಾರ್ಥಿಗಳಲ್ಲಿ ವೈವಿಧ್ಯಮಯ ಜನಜೀವನ, ಶಿಲ್ಪಕಲೆ, ಐತಿಹಾಸಿಕ ಕಟ್ಟಡಗಳ ಬಗ್ಗೆ ಧನಾತ್ಮಕ ಮನೋಭಾವನೆಗಳ ಸಂವರ್ಧನೆ.

೨) ಸ್ಥಳೀಯ ಸಂಸ್ಕೃತಿ ಹಾಗೂ ಪರಂಪರೆಗಳ ಪರಿಚಯ ಮತ್ತು ನಾಡುನುಡಿ ಕುರಿತಾಗಿ ಹೆಮ್ಮೆಯನ್ನು ಹಾಗೂ ಅಭಿಮಾನವನ್ನು ಬೆಳೆಸುವುದು.

೩) ಸಹಬಾಳ್ವೆ ಹಾಗೂ ಸಹಭಾಗಿತ್ವದ ಮಹತ್ವ ತಿಳಿಸುವುದು.

೪) ಇತರೆ ಧರ್ಮ, ಜಾತಿ ಹಾಗೂ ಪ್ರಾಂತ್ಯದ ಜನರೊಂದಿಗೆ ಸಂವೇದನೆ ಮತ್ತು ಸಹಕಾರ ಮನೋಭಾವ ಬೆಳೆಸುವುದು.

೫) ವೈಜ್ಞಾನಿಕ ಹಾಗೂ ತಾಂತ್ರಿಕ ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ಪಡೆಯುವುದು.

೬) ಮಕ್ಕಳಲ್ಲಿ ಸರ್ವತೋಮುಖ ವ್ಯಕ್ತಿತ್ವದ ವಿಕಾಸವನ್ನುಂಟು ಮಾಡುವುದು.

೭) ಪಠ್ಯಪುಸ್ತಕದಲ್ಲಿನ ಮಾಹಿತಿ ಹಾಗೂ ಹೊರ ಪ್ರಪಂಚದ ವಾಸ್ತವ್ಯದ ನಡುವೆ ಇರುವ ಅಂತರವನ್ನು ಅರ್ಥೈಸುವುದು.

೮) ಮಕ್ಕಳಲ್ಲಿ ಸೃಜನಾತ್ಮಕ ಚಟುವಟಿಕೆಗಳನ್ನು ಪ್ರೋತ್ಸಾಹಿಸುವುದು.

೯) ಕಲಿಕೆಯನ್ನು ಶಾಶ್ವತಗೊಳಿಸುವುದು.

೧೦)ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಭಾವನೆ, ಸಮಾಜ ಸೇವೆ, ಭಾವೈಕ್ಯತೆ, ದೇಶಪ್ರೇಮ ಮುಂತಾದ ಸದ್ಗುಣಗಳನ್ನು ಬೆಳೆಸುವುದು.

೧೧) ಮಕ್ಕಳು ಶಿಕ್ಷಣದಲ್ಲಿ ಆಸಕ್ತಿ ಬೆಳೆಸಿಕೊಂಡು ಪಠ್ಯೇತರ ಹಾಗೂ ಶೈಕ್ಷಣಿಕ ಚಟುವಟಿಕೆಗಳಲ್ಲಿ ಉತ್ಸಾಹದಿಂದ ಭಾಗವಹಿಸುವಂತೆ ಪ್ರೇರೇಪಿಸುವುದು.

೧೨)ಮಕ್ಕಳು ಶಾಲೆಯತ್ತ ಹೆಚ್ಚು ಆಕರ್ಷಿತರಾಗಿ ಹಿರಿಯ ಪ್ರಾಥಮಿಕ ಹಂತದಲ್ಲಿ ಶಾಲೆ ಬಿಡುವ ಸಾಧ್ಯತೆಗಳನ್ನು ಕಡಿಮೆ ಮಾಡುವುದು.

**ಸಮಸ್ಯೆ ಇದ್ದಲ್ಲಿ ಈ ಕೆಳಗಿನವರನ್ನು ಸಂಪರ್ಕಿಸಬಹುದು.**

ಉಪನಿರ್ದೇಶಕರು (ಆಡಳಿತ) – ೯೪೪೮೯೯೯೩೪೩

ಉಪನಿರ್ದೇಶಕರು (ಅಭಿವೃದ್ಧಿ) – ೯೪೪೮೯೯೯೩೭೨

ಡಿ.ವೈ.ಪಿ.ಸಿ. – ೯೪೪೮೯೯೯೩೯೯

**ಕ್ಷೇತ್ರ ಶಿಕ್ಷಣಾಧಿಕಾರಿಗಳು – ಕ್ಷೇತ್ರ ಸಮನ್ವಯಾಧಿಕಾರಿಗಳು**

ಬ್ಯಾಡಗಿ ೯೪೮೦೬೯೫೨೪೬ ೯೪೮೦೬೯೫೨೫೩

ಹಾನಗಲ್ ೯೪೮೦೬೯೫೨೪೭ ೯೪೮೦೬೯೫೨೫೪

ಹಾವೇರಿ ೯೪೮೦೬೯೫೨೪೮ ೯೪೮೦೬೯೫೨೫೫

ಹಿರೇಕೆರೂರು ೯೪೮೦೬೯೫೨೪೯ ೯೪೮೦೬೯೫೨೫೬

ರಾಣೇಬೆನ್ನೂರು ೯೪೮೦೬೯೫೨೫೦ ೯೪೮೦೬೯೫೨೫೭

ಸವಣೂರು ೯೪೮೦೬೯೫೨೫೧ ೯೪೮೦೬೯೫೨೫೮

ಶಿಗ್ಗಾಂವ ೯೪೮೦೬೯೫೨೫೨ ೯೪೮೦೬೯೫೨೫೯

## ಬ್ಯಾಡಗಿ ತಾಲೂಕು

**ಸುಕ್ಷೇತ್ರ ಕಾಗಿನೆಲೆ**

ಜಿಲ್ಲಾ ಕೇಂದ್ರದಿಂದ ದೂರ : ೧೨ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦೬ ಕಿ.ಮೀ.



ಕಾಗಿನೆಲೆಯ ನರಸಿಂಹ ದೇವಸ್ಥಾನ

ಕಾಗಿನೆಲೆಯೆನ್ನುತ್ತಲೇ ನೆನಪಾಗುವುದು ಸಂತ ಕನಕದಾಸರ ಹೆಸರು. ಇವರು ತನ್ನ ಇಷ್ಟದೇವರಾದ ಆದಿಕೇಶವನ ಸನ್ನಿದಿಯಲ್ಲಿ ತಮ್ಮ ಕೊನೆಯ ದಿನಗಳಲ್ಲಿ ಕೀರ್ತನೆಗಳನ್ನು ರಚಿಸಿದರು. ಕಾಗಿನೆಲೆಯಲ್ಲಿ ಕನಕದಾಸರ ಸಮಾಧಿ ಇದೆ. ಹಾಡು ಮಂಡಿಗೆಗಳಿಂದ ಪ್ರಸಿದ್ಧವಾಗಿದ್ದು, ಅವರ ನೆನಪಿಗಾಗಿ ಸಮಾಧಿಗೆ ಸುಂದರವಾದ ದೇವಸ್ಥಾನವನ್ನು ನಿರ್ಮಿಸುವ ಜವಾಬ್ದಾರಿಯು ಸರಕಾರದ ಪ್ರಾಧಿಕಾರದಲ್ಲಿ ನಡೆಯುತ್ತಿದೆ. ಕನಕದಾಸರ ಕೀರ್ತನೆಗಳ

ಸಂಗ್ರಹಾಲಯ ಮತ್ತು ಸಂಶೋಧನಾ ಕೇಂದ್ರವು ಇಲ್ಲಿದೆ. ಕನಕದಾಸರ ಗದ್ದುಗೆಯ ಮೇಲೆ ೨೬ ಕಂಬಗಳ ದೇವಸ್ಥಾನವಿದೆ.

ಕನಕ ಗುರುಪೀಠದಲ್ಲಿ ೧೨ ನೇ ಶತಮಾನದ ಕಾಳಹಸ್ತೇಶ್ವರ ದೇವಸ್ಥಾನ, ವೀರಭದ್ರ ದೇವಸ್ಥಾನ, ನರಸಿಂಹದೇವರ ದೇವಸ್ಥಾನ ಮತ್ತು ಆದಿಕೇಶವ ದೇವಸ್ಥಾನಗಳನ್ನು ಕಾಣಬಹುದು. ಇಲ್ಲಿಗೆ ಸಮೀಪದ ಬಾಡ ಗ್ರಾಮದಲ್ಲಿ ಕನಕದಾಸರ ಮನೆಯ ಅವಶೇಷಗಳು ಸಿಕ್ಕಿದ್ದು, ಇದೊಂದು ಪ್ರೇಕ್ಷಣೀಯ ಸ್ಥಳವಾಗಿದೆ.

**ಮೆಣಸಿನಕಾಯಿ ಮಾರುಕಟ್ಟೆ, ಬ್ಯಾಡಗಿ**

ಜಿಲ್ಲಾ ಕೇಂದ್ರದಿಂದ ದೂರ : ೧೮ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೦ ಕಿ.ಮೀ.



ಬ್ಯಾಡಗಿ ಮೆಣಸಿನಕಾಯಿ ಮಾರುಕಟ್ಟೆಯು ದೇಶದಲ್ಲಿ ಶ್ರೇಷ್ಠವಾದ ಮಾರುಕಟ್ಟೆ ಎನಿಸಿದೆ. ಈ ಮಾರುಕಟ್ಟೆಯು ದಿನಾಂಕ ೧೫-೦೨-೧೯೪೮ರಲ್ಲಿ ಆರಂಭವಾಯಿತು. ಈಗ ಸುಮಾರು ೬೮ ಎಕರೆ ವಿಸ್ತಾರದಲ್ಲಿ ಬೆಳೆದು ನಿಂತಿದೆ.

ಸಾಂಬಾರು ಪದಾರ್ಥಗಳನ್ನು ತಯಾರಿಸುವ ಖ್ಯಾತ ಕಂಪನಿಗಳಾದ ಎಂ.ಡಿ.ಹೆಚ್, ಎಂ.ಟಿ.ಆರ್, ಆಕಾಯ್, ಕಂಪನಿಗಳು ಬ್ಯಾಡಗಿ ಮಾರುಕಟ್ಟೆಯಿಂದ ಶ್ರೇಷ್ಠ ದರ್ಜೆಯ ಮೆಣಸಿನಕಾಯಿಗಳನ್ನು ಪಡೆಯುತ್ತವೆ. ಆಡಳಿತ ಕಛೇರಿ, ರಸ್ತೆಗಳು, ಚರಂಡಿಗಳು, ಗೋದಾಮುಗಳು, ಚಿಕ್ಕಮಳಿಗೆಗಳು, ಅತಿಥಿಗೃಹ, ಸಿಬ್ಬಂದಿ ವಸತಿಗೃಹಗಳು, ನೀರಿನ ವ್ಯವಸ್ಥೆ, ಜನರೇಟರ್ ಮೂಲಕ ಬೆಳಕಿನ ವ್ಯವಸ್ಥೆ, ಮಾರಾಟ ಭವನ, ಧ್ವನಿವರ್ಧಕಗಳ ಮೂಲಕ ಟೆಂಡರ್ ಪ್ರಕಟಿಸುವ ವ್ಯವಸ್ಥೆ ಹೀಗೆ ಇನ್ನೂ ಹಲವು ಪ್ರಾಥಮಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ತಾಲೂಕಿನ ಬಹುಪಾಲು ಹಳ್ಳಿಗಳಿಗೆ ರೂ. ೧.೨೬ ಕೋಟಿ ವೆಚ್ಚದಲ್ಲಿ ರಸ್ತೆಗಳನ್ನು ನಿರ್ಮಿಸಲಾಗಿದೆ. ಹಳ್ಳಿಗಳಲ್ಲಿ ಗೋಧಾಮುಗಳನ್ನು ನಿರ್ಮಿಸಿ ರೈತರ ಹಿತರಕ್ಷಣೆಯನ್ನು ಮಾಡಲಾಗುತ್ತಿದೆ.

**ಸಾವಯವ ಕೃಷಿ ಪದ್ದತಿ, ಚಿನ್ನಿಕಟ್ಟಿ ಗ್ರಾಮ**

ಜಿಲ್ಲಾ ಕೇಂದ್ರದಿಂದ ದೂರ : ೨೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೦ ಕಿ.ಮೀ



ಇಂದಿನ ದಿನಗಳಲ್ಲಿ ರಾಸಾಯನಿಕ ಮತ್ತು ಔಷಧಿಗಳನ್ನು ಹೆಚ್ಚಾಗಿ ಉಪಯೋಗಿಸುವ ರೈತರಿಗೆ ಪ್ರತಿಸ್ಪರ್ಧಿಯಾಗಿ ಅತೀ ಕಡಿಮೆ ವೆಚ್ಚದ ಮತ್ತು ಪೌಷ್ಠಿಕಾಂಶವುಳ್ಳ ಬೆಳೆಯನ್ನು ಬೆಳೆಯುವ ರೈತರಲ್ಲಿ ಇಲ್ಲಿಯ ಶ್ರೇಣಿಕ ರಾಜ 'ಎಳವತ್ತಿರುವರ' ಇವರ ಸಹಕಾರದಿಂದ ಈ ಗ್ರಾಮದಲ್ಲಿ ರೈತರು ಬೀಜ ಬ್ಯಾಂಕಿನಲ್ಲಿ ಸಂಗ್ರಹಿಸಿದ ಬೀಜಗಳಿಗೆ ರಾಜ್ಯದ ಮಂಡ್ಯ, ಮೈಸೂರು, ಕೋಲಾರ, ತುಮಕೂರ ಮುಂತಾದ ಭಾಗಗಳಿಂದ ಹೆಚ್ಚು ಬೇಡಿಕೆ ಕಂಡುಬರುತ್ತದೆ. ಇಲ್ಲಿ ಸಣ್ಣ ಭತ್ತ, ದೊಡ್ಡ ಭತ್ತ, ಸೇಲಂ, ಪೈನಾ, ಗಂಧಸಾಲಿ, ರಾಗಿ,

ದೊಡ್ಡಜೋಳ, ಸಣ್ಣ ಜೋಳ, ನವಣೆ, ಗೋವಿನಜೋಳ, ಕರಿಗೋವಿನಜೋಳ, ತೊಗರಿ, ಹೆಸರು, ಅಲಸಂದಿ, ಅವರೆ, ಉದ್ದು ಅಲ್ಲದೇ ಇನ್ನಿತರ ತರಕಾರಿ ಬೀಜಗಳನ್ನು ಸಾವಯುವ ವ್ಯವಸಾಯದಿಂದ ಬೆಳೆಯಲಾಗುತ್ತದೆ. ಈ ಕೃಷಿ ಪದ್ಧತಿಯನ್ನು ಅಮೇರಿಕಾ, ಆಸ್ಟ್ರೇಲಿಯಾ ಮುಂತಾದ ದೇಶಗಳ ಕೃಷಿ ತಜ್ಞರು ಭೇಟಿ ನೀಡಿ ವೀಕ್ಷಿಸಿದ್ದಾರೆ.
ಅಲ್ಲದೇ ಅನೇಕ ರಾಜ್ಯಗಳ ರೈತರು ಆಗಮಿಸಿ ಪರಿಶೀಲಿಸಿ ಈ ಪದ್ಧತಿಯನ್ನು ಅಳವಡಿಸಿಕೊಂಡಿದ್ದಾರೆ.

**ಕೋಟೇಶ್ವರ ದೇವಸ್ಥಾನ, ಹಿರೇಹಳಿ**

ಜಿಲ್ಲಾ ಕೇಂದ್ರದಿಂದ ದೂರ : ೨೫ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೫ ಕಿ.ಮೀ.



ಶ್ರೀ ಕೋಟೇಶ್ವರ ದೇವಸ್ಥಾನ
ಅದ್ಭುತ ಶಿಲ್ಪಕಲಾ ವೈಭವದಿಂದ ನಾಡಿನ ಚರಿತ್ರೆ, ಸಂಸ್ಕೃತಿ ಮತ್ತು ಪರಂಪರೆಗಳನ್ನು ಸಾರುವ ಪ್ರಾಚೀನ ದೇವಸ್ಥಾನವು ಇದಾಗಿದೆ. ಇದನ್ನು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಲಾಗಿದೆ. ಕಲ್ಯಾಣದ ಚಾಲುಕ್ಯರ ನಾಲ್ಮಡಿ ವಿಕ್ರಮಾದಿತ್ಯನು ೧೨ನೇ ಶತಮಾನದಲ್ಲಿ ಇದನ್ನು ನಿರ್ಮಿಸಿದನು.
ಈ ದೇವಸ್ಥಾನವು ಗ್ರಾಮದ ಹೊರವಲಯದಲ್ಲಿದೆ. ಗರ್ಭಗೃಹ, ಅಂತರಾಳ, ವಿಶಾಲವಾದ ಕಕ್ಷಾಸನವನ್ನು ಹೊಂದಿದೆ. ಈ ದೇವಾಲಯದ ನವರಂಗಗಳು ಚಾಲುಕ್ಯ ಶೈಲಿಯಲ್ಲಿದ್ದು, ಉತ್ಕೃಷ್ಟವಾಗಿವೆ. ಕಿರುಶಿಖರವು ಅಲಂಕಾರ ಸ್ಥಂಭಗಳಿಂದ ಶೃಂಗರಿಸಲ್ಪಟ್ಟಿದೆ. ಹಲವಾರು ಶಿಲಾಶಾಸನಗಳನ್ನು ಈ ದೇವಸ್ಥಾನದಲ್ಲಿ ಕಾಣಬಹುದಾಗಿದೆ.

**ಕಾಂತೇಶ ದೇವಸ್ಥಾನ ಕದರಮಂಡಲಗಿ**

ಜಿಲ್ಲಾ ಕೇಂದ್ರದಿಂದ ದೂರ : ೨೪ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೬ ಕಿ.ಮೀ.



**ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ** - ಕರ್ನಾಟಕದ ತಿರುಪತಿ ಕ್ಷೇತ್ರವೆಂದೇ ಪ್ರಸಿದ್ಧವಾದ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಕದರಮಂಡಲಗಿಯು ಶಿಲಾಯುಗ ಪೂರ್ವದ ಇತಿಹಾಸ ಹೊಂದಿದ್ದು, ಇಂದಿನ ಕಾಂತೇಶ ದೇವಸ್ಥಾನವು ಸುಪ್ರಸಿದ್ಧವಾಗಿದೆ. ಈ ದೇವರು ಪಾಂಡವರ ವಂಶಜರಾದ ಜಯಮೇಜಯರಾಜನ ಪ್ರಾಣದೇವರಾಗಿತ್ತು. ಸಂತ ಕನಕದಾಸರು ಕಾಂತೇಶನ ದರ್ಶನ ಪಡೆದರೆಂದು ಪ್ರತೀತಿ ಇದೆ. ಇಲ್ಲಿ ಪಂಚಲಿಂಗೇಶ್ವರ ದೇವಸ್ಥಾನಗಳಾದ ಶ್ರೀ ಮುಕ್ಕಣ್ಣೇಶ್ವರ, ಕಲ್ಲೇಶ್ವರ, ಶ್ರೀ ರಾಮಲಿಂಗೇಶ್ವರ, ಶ್ರೀ ನೀಲಕಂಠೇಶ್ವರ, ಶ್ರೀ ಗವಿಸಿದ್ದೇಶ್ವರ ದೇವಸ್ಥಾನಗಳು ಹೊಯ್ಸಳರ ಶೈಲಿಯಲ್ಲಿ ಇರುತ್ತವೆ. ಅಷ್ಟಲ್ಲದೇ ಹನುಮ ಜಯಂತಿಯ ದಿನ ತೆಪ್ಪೋತ್ಸವ ನಡೆಯುತ್ತಿದ್ದು, ಅದಕ್ಕಾಗಿ ಒಂದು ದೊಡ್ಡ ಹೊಂಡವೇ ಇದೆ. ಇತ್ತೀಚೆಗೆ ಈ ದೇವಸ್ಥಾನದ ಜೀರ್ಣೋದ್ಧಾರ ಕೈಗೊಂಡು ಬೃಹತ್ ಗೋಪುರ ನಿರ್ಮಿಸಲಾಗಿದ್ದು, ಅಂದಾಜು ೧೦೧ ಅಡಿ ಎತ್ತರವಿರುವ ಈ ಗೋಪುರವು ಭಕ್ತರನ್ನು ಕೈಬೀಸಿ ಕರೆಯುತ್ತದೆ.

# ಹಾನಗಲ್ ತಾಲೂಕು

**ಶಾಂತೇಶ್ವರ ದೇವಸ್ಥಾನ, ತಿಳವಳ್ಳಿ ಗ್ರಾಮ**

ಜಿಲ್ಲಾ ಕೇಂದ್ರದಿಂದ ದೂರ : ೩೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೨೦ ಕಿ.ಮಿ



ಶ್ರೀ ಶಾಂತೇಶ್ವರ ಸ್ವಾಮಿ ದೇವಸ್ಥಾನ

ಹಾನಗಲ್ ತಾಲೂಕಿನ ತಿಳವಳ್ಳಿಯ ಶ್ರೀ ಶಾಂತೇಶ್ವರ ದೇವಸ್ಥಾನವು ೧೩ನೇ ಶತಮಾನದ್ದಾಗಿದ್ದು, ಹೊಯ್ಸಳರ ಮಾಂಡಲೀಕ ಅರಸರು ಕಟ್ಟಿದ್ದಾರೆಂಬ ಪ್ರತೀತಿ ಇದೆ. ಯುದ್ಧದಲ್ಲಿ ಸೋತ ಸಾಮಂತರು ಮನಸ್ಸಿನ ಶಾಂತಿಗಾಗಿ ಶಾಂತೇಶ್ವರ ದೇವಸ್ಥಾನ ನಿರ್ಮಿಸಿದ್ದಕ್ಕಾಗಿ ಈ ದೇವಸ್ಥಾನಕ್ಕೆ ಶಾಂತೇಶ್ವರ ಎಂದು ಹೆಸರು ಬರಲು ಕಾರಣವಾಯಿತು.

ದೇವಾಲಯವು ೪೮ ಕಂಬಳಿರುವ ಒಳಾಂಗಣ ಹೊಂದಿದ್ದು, ಮಧ್ಯ ಪ್ರಾಂಗಣವನ್ನು ಹೊಂದಿದೆ. ದೇವಾಲಯದ ಮೇಲ್ಛಾವಣಿಯಲ್ಲಿ ಸುಂದರ ಕೆತ್ತನೆ ಇದೆ. ಕಂಬಗಳ ಕೆತ್ತನೆಯು ಅತ್ಯಂತ ಸುಂದರವಾಗಿದ್ದು, ದೇವಾಲಯವು ಸೊಗಸಾದ ಗೋಪುರದಿಂದ ಕಂಗೊಳಿಸುತ್ತದೆ.

**ಗುರು ನಂಜೇಶ್ವರಮಠ, ಸುಕ್ಷೇತ್ರ ಕೂಡಲ**

ಜಿಲ್ಲಾ ಕೇಂದ್ರದಿಂದ ದೂರ : ೫೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ : ೧೫ ಕಿ.ಮೀ.



ಶ್ರೀ ಗುರು ನಂಜುಂಡೇಶ್ವರ, ಕೂಡಲ
ಕೂಡಲ ಸುಕ್ಷೇತ್ರದಲ್ಲಿ ಶ್ರೀಗುರು ನಂಜೇಶ್ವರ ಮಠವು ಆಧ್ಯಾತ್ಮಿಕ ಬೆಳಕನ್ನು ಉಂಟುಮಾಡುತ್ತಾ ಬಂದಿದೆ.

ಶ್ರೀಮಠದ ಕರ್ತೃ ಶ್ರೀಗುರು ನಂಜೇಶ್ವರರು ಪವಿತ್ರ ಪರಂಪರೆಯನ್ನು ಜನಮನಕ್ಕೆ ಮುಟ್ಟಿಸಿದರು. ಶ್ರೀ ಸಂಗಮೇಶ್ವರ ದೇವಸ್ಥಾನವು ಶ್ರೀಗುರು ನಂಜುಂಡೇಶ್ವರ ಮಠದ ಮುಂಭಾಗದಲ್ಲಿದೆ. ಸುಂದರವಾದ ಕಟ್ಟಡವು ಭಕ್ತರ ಮನಸೆಳೆಯುತ್ತದೆ. ಮಠದ ಬಲಭಾಗದಲ್ಲಿ ವರದಾ ನದಿ ಹಾಗೂ ಧರ್ಮಾನದಿಗಳ ಸಂಗಮವಿದೆ. ಮಠದ ಮುಂಭಾಗ ನದಿಗಳ ಸಂಗಮ ಭಕ್ತರ ಕಣ್ಮನಗಳನ್ನು ಸೆಳೆಯುತ್ತದೆ. ಪಕ್ಕದಲ್ಲಿಯ ತೋಟಗಳ ದೃಶ್ಯ ಸುಂದರವಾಗಿ ಗೋಚರಿಸುತ್ತದೆ.

ಪೂಜ್ಯ ಶ್ರೀಗುರು ನಂಜೇಶ್ವರ ಮಹಾಸ್ವಾಮಿಗಳು ಅನೇಕ ಭವ್ಯ ಕಾರ್ಯಕ್ರಮಗಳ ನೇತೃತ್ವ ವಹಿಸಿ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾರೆ.

**ಕಲ್ಲೇಶ್ವರ ದೇವಸ್ಥಾನ, ಕಲಕೇರಿ**

ಜಿಲ್ಲಾ ಕೇಂದ್ರದಿಂದ ದೂರ : ೧೮ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೨೦ ಕಿ.ಮೀ.



ಶ್ರೀ ಕಲ್ಲೇಶ್ವರ ಸ್ವಾಮಿ ದೇವಸ್ಥಾನ
ಹಾನಗಲ್ ತಾಲೂಕಿನ ಕಲಕೇರಿ ಗ್ರಾಮದಲ್ಲಿ ಕಲ್ಲೇಶ್ವರ ದೇವಸ್ಥಾನವಿದೆ. ಇದು ನಾಲ್ಕು ಶಿಖರಗಳನ್ನೊಳಗೊಂಡ, ಕಲ್ಲಿನಿಂದ ಕೆತ್ತಿದ ದೇವಸ್ಥಾನವಾಗಿದೆ. ಕ್ರಿ.ಶ. ೧೦೫೮ರಲ್ಲಿ ಉದಯಾದಿತ್ಯನೆಂಬ ಪಲ್ಲವ ವಂಶದ ರಾಜ ಸೋತು ಈ ದೇವಸ್ಥಾನವನ್ನು ಕಟ್ಟುವುದನ್ನು ಕೈಬಿಟ್ಟಾಗ ಅವನ ಹೆಂಡತಿ ಮಳಲಾದೇವಿಯು ಇದನ್ನು ಮುಂದುವರೆಸಿದರೂ ಸಹಿತ ದೇವಾಲಯ ಪೂರ್ಣಗೊಳ್ಳಲಿಲ್ಲ.

ಈಗ ಧರ್ಮಸ್ಥಳದ ಡಾ|| ವೀರೇಂದ್ರ ಹೆಗಡೆ ಇವರ ನೇತೃತ್ವದಲ್ಲಿ ಪುನರುತ್ಥಾನಗೊಂಡಿದೆ. ೧೫ ಲಕ್ಷ ರೂಪಾಯಿಯ ವೆಚ್ಚದಲ್ಲಿ ಈ ಜೀರ್ಣೋದ್ಧಾರವು ನಡೆಯುತ್ತಿದೆ. ಇದಕ್ಕೆ ಸರ್ಕಾರ ಹಾಗೂ ಭಕ್ತಸಮೂಹ ಸಹಾಯ ಮಾಡಿದೆ. ಇಲ್ಲಿ ಸೋಮೇಶ್ವರ ದೇವಸ್ಥಾನವಿದ್ದು, ಮುಂದೆಯೇ ತಾವರೆಯ ಕೆರೆಯೊಂದು ಇದೆ.

ಇದಲ್ಲದೇ ಕಲ್ಲಿನ ಗ್ರಾಮದೇವತೆ, ಬುದ್ಧವಿಹಾರ, ಬನಶಂಕರಿ ಹಾಗೂ ಕಟ್ಟಿಗೆಯ ವೀರಭದ್ರ ದೇವಸ್ಥಾನಗಳಿವೆ.

**ಕಲ್ಮೇಶ್ವರ ದೇವಸ್ಥಾನ, ಬಾಳಂಬೀಡ**

ಜಿಲ್ಲಾ ಕೇಂದ್ರದಿಂದ ದೂರ : ೨೦ ಕಿ.ಮೀ.
ತಾಲ್ಲೂಕು ಕೇಂದ್ರದಿಂದ ದೂರ: ೧೮ ಕಿ.ಮೀ.



ಶ್ರೀ ಕಲ್ಮೇಶ್ವರ ದೇವಸ್ಥಾನ
ಜಿಲ್ಲಾ ಕೇಂದ್ರ ಹಾವೇರಿಯಿಂದ ಪಶ್ಚಿಮ ದಿಕ್ಕಿನತ್ತ ಇರುವ ಬಾಳಂಬಿಡದಲ್ಲಿ ವೀರಗಲ್ಲು, ಮಾಸ್ತಿಕಲ್ಲು ಹಾಗೂ ಶಿಲಾ ಶಾಸಗಳು ದೊರೆಯುತ್ತವೆ. ಬಾಳಂಬಿಡದಲ್ಲಿರುವ ಕಲ್ಮೇಶ್ವರ ದೇವಸ್ಥಾನವು ಕದಂಬರಿಂದ ನಿರ್ಮಿತವಾಗಿದೆ ಎಂಬ ಪ್ರತೀತಿ ಇದೆ.

ಪಾಳೇಗಾರ ಮನೆತನದ ಮಲ್ಲರಸ ಎಂಬುವವನು ಬಳ್ಳಾರಿಯಿಂದ ಬಂದು ಸೈನ್ಯದೊಂದಿಗೆ ಇಲ್ಲಿ ಬೀಡು ಬಿಟ್ಟಿದ್ದರಿಂದ “ಬಳ್ಳಾರಿ ಬೀಡು” ಎಂಬ ಹೆಸರು ಪಡೆದು ಮುಂದೆ ಬಾಳಂಬೀಡ ಎಂಬ ಹೆಸರು ಪಡೆಯಿತು.

ಮಲ್ಲರಸನು ಹಿಂದೆ ಈ ಗ್ರಾಮಕ್ಕೆ ೨೧ ಎಕರೆ ತೋಟವನ್ನು ದಾನಮಾಡಿದ್ದನಂತೆ. ಆದರೆ ಇಂದು ಅದರ ಕುರುಹು ಇಲ್ಲ. ಇಲ್ಲಿಯ ವರದಾನದಿಯ ತಟದಲ್ಲಿ ರಾಮೇಶ್ವರ ದೇವಸ್ಥಾನವಿದ್ದು, ಇದೊಂದು ಐತಿಹಾಸಿಕ ಪ್ರೇಕ್ಷಣೀಯ ಸ್ಥಳವಾಗಿದೆ.

## ಸಾಹಿತ್ಯ ರಚನಾ ತಂಡ

**೧. ಮಾನ್ಯ ಶ್ರೀ ಎ.ಎಂ. ಅಕ್ಕಿ, ಅಧ್ಯಕ್ಷರು**
ಮಾನ್ಯ ಉಪನಿರ್ದೇಶಕರು (ಅಭಿವೃದ್ಧಿ)
ಡಯಟ್, ಹಾವೇರಿ.

**೨. ಶ್ರೀಮತಿ ಕೆ.ಎಂ. ಸುನೀತ ಕಾರ್ಯದರ್ಶಿಗಳು**
ಹಿರಿಯ ಉಪನ್ಯಾಸಕರು
ಡಯಟ್, ಹಾವೇರಿ.

**೩. ಶ್ರೀ ಕೆ.ಆರ್. ಹಿರೇಮಠ**
ಸದಸ್ಯರು
ಬಿ.ಆರ್.ಪಿ. ಹಾವೇರಿ.

**೪. ಶ್ರೀ ಎಂ.ಎಸ್. ಮರಿಗೂಳಪ್ಪನವರ ಸದಸ್ಯರು**
ಸ.ಶಿ. ಹೆಚ್.ಪಿ.ಕೆ.ಬಿ.ಎಸ್.
ಯಲಗಚ್ಚ, ಹಾವೇರಿ ತಾಲೂಕು.

**೫. ಶ್ರೀ ಹೆಚ್.ಹೆಚ್. ದೊಡ್ಮನಿ. ಸದಸ್ಯರು**
ಬಿ.ಆರ್.ಪಿ. ರಾಣೇಬೆನ್ನೂರು.

**೬. ಶ್ರೀ ಜಿ.ಹೆಚ್. ಬಮ್ಮನಾಳ ಸದಸ್ಯರು**
ಐ.ಇ.ಆರ್.ಟಿ.
ಮಾಕನೂರ, ರಾಣೇಬೆನ್ನೂರು ತಾಲೂಕು

**೭. ಶ್ರೀ ಎಂ.ವಿ. ಕಮ್ಮಾರ ಸದಸ್ಯರು**
ಸ.ಶಿ. ಹೆಚ್.ಪಿ.ಎಸ್.
ತಿಪ್ಪಾಯಿಕೊಪ್ಪ, ಹಿರೇಕೆರೂರು ತಾಲೂಕು

**೮. ಶ್ರೀ ವಿ.ಜಿ. ಭೀಮಕ್ಕನವರ ಸದಸ್ಯರು**
ಸ.ಶಿ. ಹೆಚ್.ಪಿ.ಎಸ್.
ಕಣವಿಸಿದ್ದಗೇರಿ, ಹಿರೇಕೆರೂರು ತಾಲೂಕು

**೯. ಶ್ರೀ ಕೆ.ಎಂ. ಬಡಿಗೇರ ಸದಸ್ಯರು**

ಸ.ಶಿ. ಹೆಚ್.ಪಿ.ಎಸ್.

ಛತ್ರ, ಬ್ಯಾಡಗಿ ತಾಲೂಕು

**೧೦. ಶ್ರೀಮತಿ ಜಿ.ಬಿ. ಶೆಟ್ಟಪ್ಪನವರ ಸದಸ್ಯರು**

ಬಿ.ಆರ್.ಪಿ. ಬ್ಯಾಡಗಿ.

**೧೧. ಶ್ರೀ ಬಿ.ಹೆಚ್. ಚಲವಾದಿ ಸದಸ್ಯರು**

ಬಿ.ಆರ್.ಪಿ. ಶಿಗ್ಗಾಂವ.

**೧೨. ಶ್ರೀ ಹೆಚ್.ಆರ್. ಜಾಗಟೆ ಸದಸ್ಯರು**

ಬಿ.ಆರ್.ಪಿ. ಸವಣೂರು.

**೧೩. ಶ್ರೀ ಚಿಕ್ಕಜ್ಜನವರ ಸದಸ್ಯರು**

ಬಿ.ಆರ್.ಪಿ. ಹಾನಗಲ್